# ಪ್ರಧಾನ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಹುಣಸೂರು.

## ಸಿ.ಸಿ. ಸಂಖ್ಯೆಃ 645/2023

**ಸಾಕ್ಷಿಯನ್ನು ದಿಃ 08.07.2025 ರಂದು ಕರೆಸಿ ಪ್ರಮಾಣವಚನ ಬೋದಿಸಲಾಯಿತು.**

| | | | |
|---|---|---|---|
| ಹೆಸರು | ಮಂಜುಳ | ಸಿಡಬ್ಲ್ಯೂಃ 11 | ಪಿಡಬ್ಲ್ಯೂಃ 5 |
| ಗಂಡನ ಹೆಸರು | ರಮೇಶ | | |
| ವಯಸ್ಸು | 37 ವರ್ಷ | | |
| ಕೆಲಸ | ಗೃಹಿಣಿ | | |
| ವಾಸಸ್ಥಳ | ಮಾರಿಗುಡಿ ಬೀದಿ ಹುಣಸೂರು | | |

## ಮುಖ್ಯ ವಿಚಾರಣೆಃ ಮಾನ್ಯ ಸಸಅ ರವರಿಂದಃ

ಚಾಸಾ–2 ಗೊತ್ತು. ಚಾಸಾ–3 ನನ್ನ ಮಗಳು. ಚಾಸಾ–5 ಗೊತ್ತು. ಮೃತ ಮಂಜುನಾಥ ಗೊತ್ತು. ಅವರು ನನ್ನ ಸಂಬಂಧಿ. ಅಪಘಾತದ ಬಗ್ಗೆ ನಾನು ಪೋಲೀಸ್ ಠಾಣೆಯಲ್ಲಿ ಹೇಳಿಕೆ ನೀಡಿದ್ದೇನೆ. ದಿಃ 05.09.2023 ರಂದು ಸಂಜೆ 6.30 ರಿಂದ 7.00 ಗಂಟೆಗೆ ನನ್ನ ಸಂಬಂ ಧಿಯಾದ ಮಂಜುನಾಥರವರು ನನ್ನ ಮಗಳಾದ ಚಾಸಾ–3 ರವರನ್ನು ಗೋಬಿ ತಿನ್ನೋಣ ಎಂದು ಬುಲೆಟ್ ಬೈಕಿನಲ್ಲಿ ಕರೆದುಕೊಂಡು ಹೋಗಿದ್ದರು. ಸ್ವಲ್ಪ ಹೊತ್ತಿನ ನಂತರ ಚಾಸಾ–2 ರವರು ನನಗೆ ದೂರವಾಣಿ ಕರೆಮಾಡಿ ಬೈಕ್ ಮತ್ತು ಕಾರಿನಕೋರ್ಟ್ ಹತ್ತಿರ ಅಪಘಾತವಾಗಿದೆ ಎಂದು ಹೇಳಿದರು. ನನ್ನ ಮಗಳು ಮತ್ತು ಮಂಜುನಾಥರವರನ್ನು ಹುಣಸೂರು ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗುತ್ತಿರುವುದಾಗಿ ಚಾಸಾ–2 ರವರು ಹೇಳಿದರು. ನಾನು ತಕ್ಷಣ ಆಸ್ಪತ್ರೆಗೆ ಹೋದೆ. ಅಲ್ಲಿಂದ ಆ್ಯಂಬುಲೆನ್ಸ್ ನಲ್ಲಿ ಮೈಸೂರಿನ ಮಿಷನ್ ಆಸ್ಪತ್ರೆಗೆ ಕಳುಹಿಸಿಕೊಟ್ಟರು. ನನ್ನ ಮಗಳ ತಲೆಯ ಹಿಂಭಾಗಕ್ಕೆ, ಕೈಗೆ ಏಟಾಗಿತ್ತು. ದಿಃ 07.09.2023 ರಂದು ಮಂಜುನಾಥರವರು ಚಿಕಿತ್ಸೆ ಫಲಿಸದೇ ತೀರಿಕೊಂಡರು.

**ಪಾಟೀ ಸವಾಲುಃ ಆರೋಪಿ ಪರ ಶ್ರೀ. SNK ಪರ ಕು. ASM ವಕೀಲರಿಂದಃ**

ಚಾಸಾ-3 ರವರಿಗೆ ಈಗ 11 ವರ್ಷ. ನನ್ನ ಮಗಳಿಗೆ ಅಪಘಾತವಾಗಿದೆ ಎಂದು ಚಾಸಾ-2 ರವರು ಮಾಹಿತಿ ನೀಡಿದರು. ಕೋರ್ಟ್ ಮುಂಭಾಗ ಅಪಘಾತವಾಗಿದೆ ಎಂದು ಹೇಳಿದರು. ನಾನು ಹುಣಸೂರು ಸರ್ಕಾರಿ ಆಸ್ಪತ್ರೆಗೆ ಹೋದೆ. ಚಾಸಾ-2 ರವರು ಹೇಳುವವರೆಗೆ ನನಗೆ ಅಪಘಾತದ ವಿಚಾರ ಗೊತ್ತಿರಲಿಲ್ಲ. ಅಪಘಾತ ಹೇಗೆ ಆಯಿತು ಎಂದು ನನಗೆ ಗೊತ್ತಿಲ್ಲ ಎಂದರೆ ಕಾರಿನಿಂದ ಅಪಘಾತವಾಗಿದೆ ಎಂದು ಎಲ್ಲರನ್ನು ವಿಚಾರಿಸಿದಾಗ ತಿಳಿಯಿತು. ನಾನು ವಿಷಯಗೊತ್ತಾಗಿ ತಕ್ಷಣ ಸ್ಥಳಕ್ಕೆ ಬಂದು ನಂತರ ಆಸ್ಪತ್ರೆಗೆ ಹೋಗಿದ್ದೆ. ನಾನು ಪೋಲಿಸ್ ಠಾಣೆಗೆ ಹೋಗಿ ಹೇಳಿಕೆ ಕೊಟ್ಟಿದ್ದೇನೆ. ನಾನು ಪೋಲಿಸ್ ಠಾಣೆಗೆ ಹೋಗಿ ಹೇಳಿಕೆ ಕೊಟ್ಟಿಲ್ಲ ಎಂದರೆ ಸರಿಯಲ್ಲ. ನಾನು ಆರೋಪಿಯನ್ನು ಈ ಹಿಂದೆ ನೋಡಿಲ್ಲ.

**ಮರುವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.

(ಅನಿತ)
ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು
ಜೆ.ಎಂ.ಎಫ್.ಸಿ., ಹುಣಸೂರು.